Mr. DEPUTY SPEAKER.—Today we are having 15 questions, some of these questions will lapse, if the Hon'ble members disturb the proceedings.

Sri H. SIDDAVEERAPPA.—All these have arisen because the Government is keeping mum over this matter. They could have arranged for a debate on this three language formula by allotting two or three days. But they are shirking their responsibility. They do not want to give priority to this.

12-30 P.M.

Sri S. SIVAPPA.—The Chair will kindly allow discussion on this important issue concerning the entire State.

Sri H. SIDDAVEERAPPA.—Will they give an assurance to arrange for a debate giving two or three days ? I am asking why should they not do so ?

Sri K. V. SHANKARA GOWDA.—The demand on education is going to be placed for discussion before this House. The members will have ample scope to discuss on this subject.

Sri S. SIVAPPA.—This three-language formula is different from the demand you are placing. Education demand is different and three language formula is different. There is a policy matter involved in this formula.

Sri H. SIDDAVEERAPPA.—Our Parliamentary Affairs Minister is keeping quiet and perhaps he is sleeping although he said that an earliest opportunity will be given to discuss this formula.

Mr. DEPUTY SPEAKER.—Next question.

Land given to Bhoodan Movement

188. Sri G. MADE GOWDA (Kirugavalu).—

Will the Minister for Agriculture and Education be pleased to state :—

(*a*) the number of acres of land given to Bhoodan Movement to the Education Department in the State since the inception of the Bhoodan Movement ;

(*b*) under whose management these lands are at present ?

A.—Sri K. V. SHANKARA GOWDA (Minister for Agriculture and Education).—

(*a*) 21,750 Acres and 15 Cents.

(*b*) These lands are managed by the Head Masters and the School Betterment Committees.

ಶ್ರೀ ಜಿ. ಮಾದೇಗೌಡ.—ಮಾನ್ಯ ಶ್ರೀ ಕೆ. ಹನುಮಂತಯ್ಯನವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಈಗಿನ ವಿದ್ಯಾಭ್ಯಾಸ ಕ್ರಮವನ್ನು ಬದಲಾಯಿಸಬೇಕೆಂಬ ದೃಷ್ಟಿಯಿಂದ ಭೂದಾನ ಯಜ್ಞ ಚಳುವಳಿಯನ್ನು ಪುರು ಮಾಡಿದರು. ಆಗಲೇ ಭೂದಾನ ಯಜ್ಞದ ಚಳುವಳಿ ಮಾಡಿದ್ದರಿಂದ ಅನೇಕ ದಾನಿಗಳು ಸಾವಿರಾರು ಎಕರೆಗಳಷ್ಟು ಜಮೀನನ್ನು ಕೊಟ್ಟರು. ವ್ಯವಸಾಯವೇ ಪ್ರಧಾನವಾಗಿರತಕ್ಕ ಈ ದೇಶದಲ್ಲಿ ವಿದ್ಯಾಭ್ಯಾಸ ಕ್ರಮವನ್ನು ಬದಲಾಯಿಸಿ ವ್ಯವಸಾಯಾಭಿವೃದ್ಧಿಯನ್ನು ವಿದ್ಯಾರ್ಥಿಗಳಲ್ಲಿ ಹುಟ್ಟಿಸಬೇಕೆಂಬ ದೃಷ್ಟಿಯಿಂದ ಭೂದಾನ ಯಜ್ಞದ ಚಳುವಳಿಯನ್ನು ಯಶಸ್ವಿಗೊಳಿಸುವುದಕ್ಕಾಗಿ ದಾನಿಗಳು ಕೊಟ್ಟಂಥ ಜಮೀನುಗಳು ಯಾರ ಸ್ವಾಧೀನದಲ್ಲಿವೆ ಎಂಬುದೇ ಇದುವರೆಗೆ ಯಾರಿಗೂ ಗೊತ್ತಾಗಲಿಲ್ಲ. ಉತ್ತರದಲ್ಲಿ 21,750 ಎಕರೆ ಮತ್ತು 15 ಸೆಂಟುಗಳ ಜಮೀನನ್ನು ಶಿಕ್ಷಣ ಇಲಾಖೆಗೆ ಕೊಡಲಾಯಿತು ಎಂದು ಹೇಳಿದೆ. ಜಮೀನು ಕೊಟ್ಟಂಥ ದಾನಿಗಳೇ ಆ ಜಮೀನುಗಳನ್ನು ಅನುಭವಿಸುತ್ತಿದ್ದಾರೋ ಅಥವಾ ಆ ಜಮೀನು ಯಾರ್ಯಾರ ಸ್ವಾಧೀನದಲ್ಲಿದೆ? ಆ ಯೋಜನೆ ಈಗ ಯಾವ ರೀತಿಯಲ್ಲಿ ಕೆಲಸಮಾಡುತ್ತಿದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುವುದಕ್ಕಾಗುತ್ತದೆಯೇ?

ಶ್ರೀ ಕೆ. ವಿ ಶಂಕರಗೌಡ.—ಇದು ಹಳೆಯ ಮೈಸೂರಿನಲ್ಲಿ ಮಾತ್ರ ಜಾರಿಯಲ್ಲಿದೆ. ಜಮೀನು ದಾನವಾಗಿ ಬಂದುದು 21,750 ಎಕರೆ ಮತ್ತು 15 ಸೆಂಟುಗಳು. ಕೆಲವನ್ನು ದಾನಿಗಳು ಬಿಟ್ಟು ಕೊಟ್ಟಿಲ್ಲ. ಅವರೇ ಮಾಡುತ್ತಿದ್ದಾರೆ. ಮತ್ತೆ ಕೆಲವನ್ನು ಆಯಾಯ ಪಾಠಶಾಲೆಗಳ ಮುಖ್ಯೋಪಾಧ್ಯಾಯರು ಹಾಗೂ ಶಾರಾ ಅಭಿವೃದ್ಧಿ ಸಮಿತಿಗಳವರ ಸ್ವಾಧೀನದಲ್ಲಿವೆ. ಕೆಲವು ಕಡೆಗಳಲ್ಲಿ ಅವನ್ನು ಗುತ್ತಿಗೆಗೆ ಕೊಟ್ಟು ಗುತ್ತಿಗೆ ಪಡೆಯುತ್ತಿದ್ದಾರೆ.

Dr. R. NAGAN GOUDA.—Will the Government be pleased to publish a report on the 21,750 acres of land that have been given in connection with the Bhoodan movement giving all the details as to who are managing these lands ?

Sri K. V. SHANKARA GOWDA.—We will try to do that.

ಶ್ರೀ ಸಿ. ಎಂ. ಎನ್. ಶಾಸ್ತ್ರಿ.—(ಅ) ಪ್ರಶ್ನೆಗೆ ಉತ್ತರವಾಗಿ 21,750 ಎಕರೆ 15 ಸೆಂಟು ಗಳಷ್ಟು ಜಮೀನನ್ನು ಶಿಕ್ಷಣ ಶಾಖೆಗೆ ಕೊಟ್ಟಿದೆಯೆಂದು ಹೇಳಿದೆ. ಈ ಜಮೀನಿನಿಂದ ಉತ್ಪತ್ತಿ ಎಷ್ಟಾಗುತ್ತದೆ? ಯಾವ್ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಎಕರೆ ಜಮೀನುಗಳಿವೆ? ಆ ಜಮೀನುಗಳಲ್ಲಿ ಬಂಜರು ಭೂಮಿ ಎಷ್ಟು? ಫಲವತ್ತಾದ ಭೂಮಿ ಎಷ್ಟು?

ಶ್ರೀ ಕೆ. ವಿ. ಶಂಕರಗೌಡ.—ಈಗಿನ ಅಂದಾಜು ಪ್ರಕಾರ ಉತ್ಪತ್ತಿ ಸುಮಾರು 50 ಸಾವಿರ ರೂಪಾಯಿಗಳು. ಬಹುಭಾಗ ಬಂಜರು ಭೂಮಿ, ವ್ಯವಸಾಯಕ್ಕೆ ಯೋಗ್ಯವಾಗಿಲ್ಲ, ನಾರಾಯಣಕ್ಕಾಗಿದೆ. ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಎಕರೆ ಜಮೀನುಗಳನ್ನು ಕೊಟ್ಟಿದೆ ಎಂಬ ಬಗ್ಗೆ ನನ್ನಲ್ಲಿ ಈಗ ವಿವರ ಇಲ್ಲ. ಬೇರೆ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—21,750 ಎಕರೆ ಮತ್ತು 15 ಸೆಂಟು ಗಳಷ್ಟು ಜಮೀನನ್ನು ಭೂದಾನವಾಗಿ ಕೊಟ್ಟಿದೆ ಎಂದು ಹೇಳಿದ್ದೀರಿ. ಇದಿಷ್ಟನ್ನೂ ವಿದ್ಯಾ ಇಲಾಖೆಯವರು ವಹಿಸಿಕೊಂಡಿದ್ದಾರೆಂದು ತಿಳಿಯುತ್ತು. ಇದರ ಮೇಲೆ ವಿದ್ಯಾ ಇಲಾಖೆಯವರು ಎಷ್ಟು ಖರ್ಚು ಮಾಡಿದ್ದಾರೆ ಮತ್ತು ಇದರಿಂದ ಉತ್ಪತ್ತಿಮಾಡಿದುದೆಷ್ಟು?

ಶ್ರೀ ಕೆ. ವಿ. ಶಂಕರಗೌಡ —ವಿದ್ಯಾ ಇಲಾಖೆಯವರು ಇದರ ಮೇಲೆ ಏನೂ ಖರ್ಚುಮಾಡಲಿಲ್ಲ. ಬಂದಿರತಕ್ಕದ್ದರಲ್ಲಿ ಅನೇಕ ಭಾಗ ವಿದ್ಯಾ ಇಲಾಖೆಯ ಸ್ವಾಧೀನದಲ್ಲಿಯೇ ಇದೆ. ಮುಖ್ಯೋಪಾಧ್ಯಾಯರು ಹಾಗೂ ಶಾರಾ ಅಭಿವೃದ್ಧಿ ಸಮಿತಿಗಳವರ ಮ್ಯಾನೇಜ್‌ಮೆಂಟಿನಿಂದ ಉತ್ಪತ್ತಿ 50 ಸಾವಿರ ರೂಪಾಯಿಗಳ ಉತ್ಪತ್ತಿ ಬಂದಿದೆಯೆಂದು ನಾನು ಮೊದಲೇ ಹೇಳಿದ್ದೇನೆ.

ಶ್ರೀ ಜಿ ಮಾದೇಗೌಡ.—ಈ ಯೋಜನೆಯನ್ನು ಮಾನ್ಯ ಶ್ರೀ ಹನುಮಂತಯ್ಯನವರು ಒಂದು ಘನೋದ್ದೇಶದಿಂದ ಪ್ರಾರಂಭ ಮಾಡಿದರು. ಅವತ್ತಿನಿಂದಲೂ ಈಗಿನ ವಿದ್ಯಾಭ್ಯಾಸ ಕ್ರಮವನ್ನು ಬದಲಾವಣೆ ಮಾಡಬೇಕು, ನಮ್ಮ ಮಕ್ಕಳನ್ನು ವ್ಯವಸಾಯ ಕಸುಬಿಗೆ ಕಳುಹಿಸಬೇಕೆಂಬ ದೃಷ್ಟಿಯಿಂದ ಈ ಯೋಜನೆಯನ್ನು ಅವರು ಆಳವಡಿಸಿದ್ದರಿಂದ, ಏನಾದರೂ ಈ ಯೋಜನೆಯಿಂದ ಪ್ರಯೋಜನವಾಗುತ್ತಿದೆಯೇ? ನಮ್ಮ ಮಕ್ಕಳು ಏನಾದರೂ ಇದರಿಂದ ಪ್ರಯೋಜನ ಪಡೆದಿದ್ದಾರೆಯೇ?

ಶ್ರೀ ಕೆ. ವಿ. ಶಂಕರಗೌಡ.—ವಿದ್ಯಾಭ್ಯಾಸ ವಿಚಾರದಲ್ಲಿ ಅನೇಕ ಸುಧಾರಣೆಗಳನ್ನು ಮಾಡ ಬೇಕೆಂಬುದು ಸರ್ಕಾರದ ಗಮನದಲ್ಲಿದೆ. ಈ ದೇಶದಲ್ಲಿ ವ್ಯವಸಾಯಕ್ಕೆ ಪ್ರಾಧಾನ್ಯತೆ ಕೊಡ ಬೇಕೆಂಬ ದೃಷ್ಟಿಯಿಂದ ವ್ಯವಸಾಯ ಬೋಧನೆ ಮಾಡುವ ನಲಹೆಗಳನ್ನು ಹೆಚ್ಚುಮಾಡಿದೆ; ಜಮೀನು ಗಳು ಪಾಠಶಾಲೆಗಳಿಗೆ ಅಷ್ಟು ಹತ್ತಿರದಲ್ಲಿಲ್ಲ. ವಿದ್ಯಾರ್ಥಿಗಳು ಸರ್ಕಾರದ ಜಮೀನುಗಳ ಮೇಲೆ ತುಂಬಾ ಶ್ರಮಪಟ್ಟು ಕೆಲಸಮಾಡುವುದು ಕಷ್ಟವಾಗಿದೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಭೂ ಮಾಲೀಕರುಗಳು ಶಾಲೆಗಳಿಗೆ ಜಮೀನು ಕೊಟ್ಟಿರುವ ಬಗ್ಗೆ ಖಾತೆಗಳೇನಾದರೂ ಆಗಿವೆಯೇ, ಭೂದಾನ ಮಾಡಿರತಕ್ಕ ಬಗ್ಗೆ ಶಾಲೆಗಳ ಮುಖ್ಯೋಪಾಧ್ಯಾಯರ ಅಥವಾ ಅಭಿವೃದ್ಧಿ ಸಮಿತಿಗಳ ಹೆಸರಿನಲ್ಲಿ ರೆವಿನ್ಯೂ ದಾಖಲೆಗಳೇನಾ ದರೂ ಆಗಿವೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಯಾವ ಪತ್ರಗಳೂ ಆಗಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಈಗ ಭೂದಾನದ ಮುಖಾಂತರ ಶಿಕ್ಷಣ ಇಲಾಖೆಗೆ ಬಂದಿರತಕ್ಕ 21,750 ಎಕರೆ ಜಮೀನು ಏನಿದೆ ಇದಕ್ಕೆ ಚೈಟರ್ ಇಲ್ಲ. ಸ್ವಾಧೀನಕ್ಕೆ ಬಂದಿರುವ ಬಗ್ಗೆ ದಾಖಲೆಗಳಾಗಿಲ್ಲ. ಆದ್ದರಿಂದ ಈ ಜಮೀನನ್ನು ಸರ್ಕಾರದವರೇ ವಹಿಸಿಕೊಂಡು ಏನಾದರೂ ಮಾಡಿದರೆ ಇದಕ್ಕೆ ಉತ್ತೇಜನ ಬರುತ್ತದೆ ಎಂದು ತಮ್ಮ ಅಭಿಪ್ರಾಯ ಇಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ.—ಆ ಜಮೀನಿನಲ್ಲಿ ಬಹುಭಾಗ ಜಮೀನು ವ್ಯವಸಾಯಕ್ಕೆ ಯೋಗ್ಯವಾಗಿಲ್ಲ. ಕೆಲವು ಜಮೀನುಗಳನ್ನು ಆಯಾ ಶಾಲೆಗಳವರಿಗೆ ವಹಿಸಿದೆ, ಅವರು ಆ ಜಮೀನಿನ ಮೇಲೆ ವ್ಯವಸಾಯ ಮಾಡುತ್ತಾರೆ. ಕೆಲವರು ಗುತ್ತಿಗೆಗೆ ಕೊಟ್ಟಿದ್ದಾರೆ.

ಶ್ರೀ ಎಂ. ಬಸವರಾಜು.—ಕೆಲವರು ಆ ಜಮೀನನ್ನು ಸ್ವಂತವಾಗಿ ಮಾಡುವ ನೆಪದಲ್ಲಿ ಅಧಿಕಾರಿಗಳಿಂದ ಪ್ರಭಾವ ಬೀರಿಸಿ ಉತ್ತಮವಾದ ಜಮೀನನ್ನು ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಶ್ರೀ ಕೆ. ವಿ. ಶಂಕರಗೌಡ.—ಬಂದಿಲ್ಲ.

Sri A. R. BADARINARAYAN.—From the experience gained by the Department, is it found that these lands are an asset or a liability to the Department ?

Sri K. V. SHANKARA GOWDA.—We cannot say that it will be a liability. Some portion of the land is really good. Some portion is not so good.

ಶ್ರೀ ಪಿ. ವೆಂಕಟಗಿರಿಯಪ್ಪ.—ದಾನಿಗಳು ಕೊಟ್ಟಿರತಕ್ಕಂಥ ಅನೇಕ ಜಮೀನುಗಳನ್ನು ಆಯಾ ಸ್ಥಳದ ಪಟೇಲರು ಮತ್ತು ದೊಡ್ಡ ಮನುಷ್ಯರು ಸಾಗುವಳಿ ಮಾಡಿಸಿ ಅದರ ಉತ್ಪತ್ತಿಯನ್ನು ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಆ ಜಮೀನುಗಳನ್ನು ಬಡ ಜನರಿಗೆ ಕೊಡಿಸುವುದಾಗಲೀ ಅಥವಾ ನಂಬಂಧಪಟ್ಟ ಸ್ಕೂಲ್‌ಗಳಿಗೆ ಕೊಡಿಸುವುದಾಗಲೀ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಅಂತಹ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ. ಈ ರೀತಿಯ ಜಮೀನುಗಳು ಸ್ಕೂಲ್‌ಗಳ ವಶದಲ್ಲಿರುತ್ತದೆ ಇಲ್ಲವೆ ದಾನಿಗಳ ವಶದಲ್ಲಿ ಇರುತ್ತದೆ.

ಶ್ರೀ ಸೋಲೂರು ಸಿದ್ದಪ್ಪ.—ಭೂದಾನ ಚಳುವಳಿಯಿಂದ ಬಂದಿರತಕ್ಕಂಥ 21,750 ಎಕರೆ ಮತ್ತು 15 ಸೆಂಟುಗಳಿಗೆ ಕಂದಾಯವನ್ನು ಸರ್ಕಾರಕ್ಕೆ ಯಾರು ಕೊಡುತ್ತಿದ್ದಾರೆ ?

Sri K. V. SHANKARA GOWDA.—Notice, Sir.

ಶ್ರೀ ಸೋಲೂರು ಸಿದ್ದಪ್ಪ.—ಈ ಜಮೀನುಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಸ್ಕೂಲ್‌ಗಳು ಇಲ್ಲದಿರುವ ಕಡೆಗಳಲ್ಲಿ ಕಟ್ಟಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಆ ರೀತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಂ. ತಮ್ಮಯ್ಯ.—ಕೆಲವು ಕಡೆಗಳಲ್ಲಿ ಪಾಠಶಾಲೆಗಳಿಗೆ ಕಟ್ಟಡಗಳು ಇಲ್ಲದೆ ತೊಂದರೆಯಾಗುತ್ತಿದೆ. ಆದ್ದರಿಂದ ಈ ಜಮೀನುಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಸ್ಕೂಲ್ ಕಟ್ಟಡಗಳನ್ನು ಕಟ್ಟಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಆ ರೀತಿ ಮಾಡಿದರೆ ದಾನಿಗಳ ಅಭಿಪ್ರಾಯಕ್ಕೆ ವಿರುದ್ಧವಾಗು ತ್ತದೆಯಾದ್ದರಿಂದ ಆ ರೀತಿ ಮಾಡುವುದಕ್ಕಾಗುವುದಿಲ್ಲ.

Sri DIGAMBARA RAO B. KALMANKAR.—How many acres of land have been converted into non-agricultural land ?

Sri K. V. SHANKARA GOWDA.—None has been converted into non-agricultural land.

Sri H. SIDDAVEERAPPA.—The Hon'ble Minister was pleased to say that most of it is uncultivable land. I refute the charge made. In Chikmagalur District, I was in charge of collection and we collected nearly 4,000 acres and odd. I know more than 80 per cent of it is cultivable and good land. Is it not a fact that because this scheme was sponsored by Sri Hanumanthaiah, the succeeding Government scuttled it just to bring a bad name ?

Sri K. V. SHANKARA GOWDA —I did not say most of it is not suitable for cultivation. Some portion of it is unsuitable for cultivation. It is not the intention of the Government to scuttle the scheme of Mr. Hanumanthaiah. We are all anxious that the lend is properly used for the purpose of the schools.

Promotion in Horticulture Department

189. Sri A. MUNIYAPPA (Bagepalli).—

Will the Minister for Agriculture and Education be pleased to state :—

(*a*) (i) how many persons recruited on permanent basis in the Horticulture Department are being continued in the same post for nearly 7–8 years without giving them promotion ;

(ii) among those, how many of them are graduates and how many of them are non-graduates;

(*b*) (i) how many Officers belonging to Scheduled Castes and Scheduled Tribes are in the Horticulture Department ;

(ii) whether it has come to the notice of Government that graduate employees belonging to Scheduled Castes and Scheduled Tribes are being continued in the non-gazetted post for nearly 8 years without giving them promotion ;

(iii) if so, what action will be taken by the Government in respect of such employees ?

A.—Sri K. V. SHANKARA GOWDA (Minister for Agriculture and Education).—

(*a*) (i) None.

(ii) Does not arise.